ಅಸಲು ದಾವಾ ನಂ.138/2018

ಡಿ.ಡಬ್ಲ್ಯೂ -2.

**ಸಾಕ್ಷಿಯನ್ನು ಇಂದು ದಿನಾಂಕಃ 05.02.2025 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದ.**

ಪ್ರತಿವಾದಿಯ ತಂದೆ ನಮ್ಮ ಊರಿನವರು ನಮ್ಮ ಸಂಬಂಧಿಕರು. 1ನೇ ವಾದಿಯ ಮತ್ತು ಪ್ರತಿವಾದಿಯ ಮದುವೆ ಆಗಿ ಎಷ್ಟು ವರ್ಷಗಳಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಆದರೆ ಮದುವೆ ಆದ ಬಗ್ಗೆ ಮಾತ್ರ ಗೊತ್ತು. 2ನೇ ವಾದಿಯು ಪ್ರತಿವಾದಿಯ ಮಗ ಎಂದರೆ ಸರಿ. ಪ್ರತಿವಾದಿಯ ತಂದೆಗೆ ಎಷ್ಟು ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಮೂರು ಜನ ಅಣ್ಣತಮ್ಮಂದಿರು. ಪ್ರತಿವಾದಿಯ ತಂದೆ ಜೀವಂತ ಇರುತ್ತಾರೆ. ಪ್ರತಿವಾದಿಯು ಅವರ ತಂದೆಯೊಂದಿಗೆ ಪಾಲು ವಾಟ್ನಿ ಮಾಡಿಕೊಂಡಿರಬಹುದು. ಯಾರಿಗೆ ಎಷ್ಟು ಆಸ್ತಿ ಬಂದಿರುತ್ತದೆ ಎಂದು ಹೇಳಲು ಬರುವುದಿಲ್ಲ. ವಾದಿಯರು ಮತ್ತು ಪ್ರತಿವಾದಿಯ ಮದ್ಯ ಹಂಚಿಕೆ ಆಗಿಲ್ಲ ಎಂದರೆ ಸರಿ. 2ನೇ ವಾದಿಯು 2ನೇ ಮಗ ಎಂದರೆ ಸರಿ. 1ನೇ ವಾದಿ ಮತ್ತು ಪ್ರತಿವಾದಿಗೆ 1ನೇ ಮಗು ಗರ್ಭಪಾತವಾಗಿರುತ್ತದೆ ಎಂದರೆ ಸರಿ. ಪ್ರತಿವಾದಿಯು 1ನೇ ವಾದಿಯ ಬಳಿ ಮೋಟರ ಸೈಕಲ ತೆಗೆದುಕೊಳ್ಳಲು ರೂ.50,000/- ಕೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. 1ನೇ ವಾದಿ ಹಣ ಕೊಡಲು ಆಗುವುದಿಲ್ಲ ಎಂದ ಕಾರಣ ಪ್ರತಿವಾದಿಗೆ ಹೊಡೆ ಬಡೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು 1 ನೇ ವಾದಿಗೆ ಹೊಟ್ಟೆಯ ಮೇಲೆ ಒದ್ದ ಕಾರಣ ಅವರಿಗೆ ಗರ್ಭಪಾತ ಆಗಿತ್ತು ಎಂದರೆ ಸರಿಯಲ್ಲ. ಗರ್ಭಪಾತವಾದ ನಂತರ 1ನೇ ವಾದಿಗೆ ಅವರ ತಂದೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ತವರು ಮನೆಗೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಗರ್ಭಪಾತವಾಗಿ ಸುಮಾರು 5-6 ವರ್ಷವಾಗಿರಬಹುದು. 1ನೇ ವಾದಿಗೆ ಹುಷಾರಾದ ನಂತರ ಅವರನ್ನು ಪ್ರತಿವಾದಿಯ ಮನೆಗೆ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿಯು ಇವತ್ತಿನವರೆಗೂ ತವರು ಮನೆಯಲ್ಲಿಯೇ ಇರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯು 1ನೇ ವಾದಿಯ ತವರು ಮನೆಗೆ ಹೋಗಿರುವುದಿಲ್ಲ. 2ನೇ ವಾದಿಯು 1 ನೇ ವಾದಿ ಮತ್ತು ಪ್ರತಿವಾದಿಯ ಮಗ ಎಂದರೆ ಸರಿ. 2ನೇ ವಾದಿಯು ಪ್ರತಿವಾದಿಯ ಮನೆಯಲ್ಲಿ ಜನಿಸಿರುತ್ತಾರೆ ಎಂದರೆ ಸರಿ. 2ನೇ ವಾದಿ ಜನಿಸಿದ ಬಳಿಕ ಪ್ರತಿವಾದಿಯು ವಾದಿಯರನ್ನು ಅವರ ತವರು ಮನೆಯಲ್ಲಿ ಬಿಟ್ಟು ಬಂದಿರುತ್ತಾರೆ ಎಂದರೆ ಸಾಕ್ಷಿಯು ಇಲ್ಲಿಯವರೆಗೂ ಅವರು ತವರು ಮನೆಯಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ.

2. ಪ್ರತಿವಾದಿಯು ಈಗ ದಾನಮ್ಮ ಎಂಬುವವರನ್ನು ಮದುವೆ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ವಾದಿಯರಿಗೆ ಅವರ ತವರು ಮನೆಯಲ್ಲಿ ಬಿಟ್ಟ ದಿನದಿಂದ ಅವರ ಜೀವನಾಂಶಕ್ಕೆ ಎನು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಕೇಳಿರುವುದಿಲ್ಲ ದಾವೆಯನ್ನು ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ಒಕ್ಕಲುತನ ಮಾಡುತ್ತಾರೆ. ಪ್ರತಿವರ್ಷಕ್ಕೆ 5-6 ಲಕ್ಷ ಉತ್ಪನ್ನ ಬರುತ್ತದೆ. ವಾದಿಯರು ಆಸ್ತಿಯಲ್ಲಿ ಪಾಲು ಕೇಳಿದಾಗ ಪ್ರತಿವಾದಿಯು ನಿರಾಕರಿಸಿರುತ್ತಾರೆ ಎಂದರೆ ಸರಿ. ಪ್ರತಿವಾದಿ ಆಸ್ತಿಯಲ್ಲಿ ವಾದಿಯರಿಗೂ ಪಾಲು ಇರುತ್ತದೆ ಎಂದರೆ ಸರಿ. ನನಗೆ ವಾದಿ ಮತ್ತು ಪ್ರತಿವಾದಿಯರ ಮದ್ಯ ಆದ

ಜಗಳದ ಬಗ್ಗೆ ಮಾಹಿತಿ ಇದ್ದರೂ ಪ್ರತಿವಾದಿಯ ಮಾತು ಕೇಳಿ ಮಾಹಿತಿ ಇರುವುದಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯೂ ಹೇಳಿಕೊಟ್ಟ ಹಾಗೇ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಆಳಂದ.